**ಪಾಠ–7** **ಮೇ 12–19**

# ಮತ್ತಾಯ 24 ಮತ್ತು 25

**ಸಬ್ಬತ್ತಿನ ಮಧ್ಯಾನ್ಹ**

**ಈ ವಾರದ ಅಧ್ಯಯನಕ್ಕಾಗಿ :** ಮತ್ತಾಯ 24:1–25, ಪ್ರಕಟಣೆ 13:11–17, ಮತ್ತಾಯ 7:24–27, ಲೂಕ 21:20, 2 ಅರಸುಗಳು 23:13, ಮತ್ತಾಯ 25:1–30

**ಸ್ಮರಣ ವಾಕ್ಯ : "ಸುಳ್ಳು ಕ್ರಿಸ್ತರೂ ಸುಳ್ಳು ಪ್ರವಾದಿಗಳೂ ಎದ್ದು ಸಾಧ್ಯವಾದರೆ ದೇವರಾದುಕೊಂಡವರನ್ನೂ ಸಹ ಮೋಸಗೊಳಿಸುವುದಕ್ಕೋಸ್ಕರ ದೊಡ್ಡ ದೊಡ್ಡ ಸೂಚಕಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ಮಾಡಿ ತೋರಿಸುವರು"** (ಮತ್ತಾಯ 24:24)

ಮತ್ತಾಯ 24 ಹಾಗೂ 25 ರಲ್ಲಿ ಯೇಸುವು ಕೊನೆಯ ಕಾಲದ ಕುರಿತಾದ ಬಹಳ ಮುಖ್ಯವಾದ ಕೆಲವು ಸತ್ಯಗಳನ್ನು ತಿಳಿಸುತ್ತಾನೆ ಹಾಗೆಯೇ ಆ ಕಾಲಕ್ಕಾಗಿ ನಾವು ಹೇಗೆ ಸಿದ್ದರಾಗಬೇಕು ಎಂದು ತಿಳಿಸುತ್ತಾನೆ. ಈ ಅದ್ಯಾಯಗಳು ಕೊನೆಯ ಕಾಲದ ಘಟನೆಗಳ ಕುರಿತಾಗಿ ಯೇಸುವು ಬೋಧಿಸಿದ ಬೋಧನೆಗಳಾಗಿವೆ ಅದೇ ಸಮಯದಲ್ಲಿ ಈ ಅಧ್ಯಾಯಗಳು ಯೇರುಷಲೆಮಿನ ಮೇಲೆ ಬರಲಿರುವ ವಿನಾಶದ ಕುರಿತಾದ ಭವಿಷ್ಯದ ಎಚ್ಚರಿಕೆ ಹಾಗೂ ಈ ಸಮಯದಲ್ಲಿ ಬರಲಿರುವ ವಿನಾಶದಲ್ಲಿ ಆತನ ಮಕ್ಕಳ ಪಾಲನ್ನು ಕುರಿತು ತಿಳಿಸಲಾಗಿದೆ.

ಆದರೆ ಆತನ ಶಿಷ್ಯರಿಗೆ ತಿಳಿಸಿದ ಕ್ರಿಸ್ತನ ಮಾತುಗಳ ಮೂಲಕ ಕೊನೆಯ ಕಾಲದಲ್ಲಿ ಜೀವಿಸುವವರಿಗೆ ಅಂದರೆ ಆತನ ಹಿಂಬಾಲಕರಿಗೆ ಅದರಲ್ಲೂ ಮುಖ್ಯವಾಗಿ ಆತನ ಬರೋಣವನ್ನು ಎದುರು ನೋಡುವ ಮಕ್ಕಳ ಕುರಿತಾಗಿ ಅಂದರೆ ಆತನು ಬರುವ ತನಕ ಜೀವಿಸುವವರನ್ನು ಉದ್ದೇಶಿಸಿ ಮಾತನಾಡುತ್ತಾನೆ. ಯೇಸುವು ಸುಂದರವಾದ ಚಿತ್ರಣವನ್ನು ಬಿಡಿಸುವುದಿಲ್ಲ. ಯುದ್ದಗಳು, ಯುದ್ದಗಳ ಕುರಿತಾದ ಸುದ್ದಿಗಳು, ಪ್ರವಾಹಗಳು, ಸುಳ್ಳು ಪ್ರವಾದಿಗಳು, ಮತ್ತು ಹಿಂಸೆಗಳು

ಇವೆಲ್ಲವೂ ಲೋಕದಲ್ಲಿ ಹೆಚ್ಚಾಗಿ ನಡೆಯುತ್ತವೆ, ಮತ್ತು ಅವು ಆತನ ಸಭೆಯ ಮೇಲೆ ಹೆಚ್ಚಾಗಿ ನಡೆಯುತ್ತವೆ. ಅದ್ಭುತವಾಗಿ ನಾವು ಚರಿತ್ರೆಯನ್ನು ಒಮ್ಮೆ ಅವಲೋಕಿಸಿದಾಗ ಇವು ಹೇಗೆ ಸರಿಯಾದ ಸಮಯದಲ್ಲಿ ನಡೆದಿವೆ ಎಂಬುದನ್ನು ಗಮನಿಸಬಹುದು. ಆದ್ದರಿಂದ ನಮ್ಮ ಜೀವಮಾನದ ಕಾಲದಲ್ಲಿ ನೆರವೇರದ ಪ್ರವಾದನೆಗಳ ವಿಷಯದಲ್ಲಿ ಆತನನ್ನು ನಾವು ನಂಬಬಹುದಾಗಿದೆ.

ಆದರೆ ಯೇಸುವು ಏನು ಬರುತ್ತಿದೆ ಎಂಬುದರ ಕುರಿತಾಗಿ ಮಾತ್ರ ಎಚ್ಚರಿಸಲಿಲ್ಲ. ಮತ್ತಾಯ 25 ಆತನು ಹೇಳಿದ ಸಾಮ್ಯದಲ್ಲಿ ನಾವು ಸರಿಯಾಗಿ ಅರ್ಥ ಮಾಡಿಕೊಂಡರೆ ಮನುಷ್ಯ ಕುಮಾರನು ಬರುವಾಗ ನಾವು ಸಿದ್ಧರಾಗಿರುತ್ತೇವೆ. ಹೌದು, ಕಷ್ಟದ ಸಮಯಗಳು ಬರುತ್ತವೆ, ಆದರೆ ಆತನು ಹಿಂತಿರುಗಿ ಬರುವಾಗ ಆತನನ್ನು ಎದುರುಗೊಳ್ಳುವ ಜನರನ್ನು ಆತನು ಸಿದ್ಧಪಡಿಸುತ್ತಾನೆ.

**ಈ ವಾರದ ಪಾಠವನ್ನುಮೇ 19 ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ.**

**ಭಾನುವಾರ**

## ಪ್ರವಾದನೆಯ ಶಕ್ತಿಶಾಲಿಯಾದ ಧೃಡಿಕರಣ

ಶಿಲುಬೆಗೆ ಮುನ್ನ ಕೊನೆಯ ದಿನಗಳಲ್ಲಿ, ಶಿಷ್ಯರು ಎಣ್ಣೆ ಮರಗಳ ಗುಡ್ಡದ ಮೇಲೆ ಆತನ ಜೊತೆಯಲ್ಲಿ ಮಾತನಾಡಿದರು. ಯೇಸುವು ದೇವಾಲಯ ನಾಶವಾಗುವುದು ಎಂದು ಹೇಳುವುದನ್ನು ಊಹಿಸಿಕೊಳ್ಳಿರಿ. ಅವರ ಮನಸ್ಸಿನಲ್ಲಿ ಏನು ಆಲೋಚನೆಗಳು ಇದ್ದವೋ ನಮಗೆ ಗೊತ್ತಿಲ್ಲ, ಆದರೆ ಅವರು ಕೇಳಿದ ಪ್ರಶ್ನೆಗೆ ಅನುಸಾರವಾಗಿ ಗಮನಿಸಿದಾಗ ದೇವಾಲಯದ ನಾಶನವನ್ನು ಅವರು ಕೊನೆಯ ಕಾಲದ ಘಟನೆಯ ಜೊತೆಗೆ ಗುರುತಿಸಿಕೊಂಡರು. (ಮತ್ತಾಯ 24:3).

**ಮತ್ತಾಯ 24:1–25, ಕೊನೆಯ ಕಾಲದ ಕುರಿತಾಗಿ ಯೇಸುವು ಹೇಳುವ ಸಂದೇಶದ ಮುಖ್ಯವಾದ ತಿರುಳು ಏನಾಗಿದೆ?**

ಮತ್ತಾಯ 24:1–25 ರಲ್ಲಿ ಇತರೆ ವಿಷಯಗಳ ಜೊತೆಗೆ ಅನೇಕ ಕಾಲಗಳಿಂದ ನಡೆದುಕೊಂಡು ಬಂದಿರುವ ವಂಚನೆಯ ಕುರಿತಾಗಿ ಯೇಸುವು ಬಹಳ ಸ್ಪಷ್ಟವಾಗಿ ತಿಳಿಸುತ್ತಾನೆ. ಈ ವಂಚನೆಗಳಲ್ಲಿ ಮುಖ್ಯವಾಗಿ ಸುಳ್ಳು ಬೋಧಕರು ಮತ್ತು ಸುಳ್ಳು ಕ್ರಿಸ್ತರು ಸೇರಿರುತ್ತಾರೆ. ಕೆಲವರು ಬಂದು ತಾವು ಕ್ರಿಸ್ತನ ಪ್ರತಿನಿಧಿಗಳು (ಸುಳ್ಳು ಪ್ರವಾದಿಗಳು) ಎಂದು ಹೇಳಿಕೊಳ್ಳುತ್ತಾರೆ, ಮತ್ತು ಕೆಲವರು ತಾವೇ ಕ್ರಿಸ್ತರು ಎಂದು ಹೇಳಿಕೊಳ್ಳುತ್ತಾರೆ. ಆಘಾತಕಾರಿ ವಿಷಯವೆಂದರೆ ಜನರು ಅವರನ್ನೂ ಕೂಡ ನಂಬುತ್ತಾರೆ.

ನಾವು ದೇವರ ವಾಕ್ಯದ ಶಕ್ತಿಶಾಲಿಯಾದ ದೃಡಿಕರಣವನ್ನು ನೋಡಿದ್ದೇವೆ. ಇತಿಹಾಸದ ಉದ್ದಕ್ಕೂ ನಮ್ಮ ದಿನಗಳಲ್ಲೂ ಕೂಡ ಮೋಸಗೊಳಿಸುವವರು ಬಂದಿದ್ದಾರೆ, ಅವರು ನಾನೇ ಕ್ರಿಸ್ತನು ಎಂದು ಹೇಳುತ್ತಾರೆ. ಎಂತಹ ಅದ್ಭುತವಾದ ಪ್ರವಾದನೆ!ಈ ಕಾಲದಲ್ಲಿ ಜೀವಿಸುವ ನಾವು ಚರಿತ್ರೆಯ ಉದ್ದಕ್ಕೂ ಮತ್ತು ನಮ್ಮ ಸುತ್ತಲೂ ಸಮೀಕ್ಷೆಯನ್ನು ನಡೆಸುವಾಗ (ಕ್ರಿಸ್ತನ ಕಾಲದಲ್ಲಿ ಜೀವಿಸಿದವರನ್ನು ಹೊರೆತು ಪಡಿಸಿ) ಇದು ಎಷ್ಟು ನಿಖರವಾದ ಭವಿಷ್ಯವಾಣಿಯಾಗಿದೆ. ಇದರಿಂದ ನಾವು ಆಶ್ಚರ್ಯಪಡಬೇಕಾಗಿಲ್ಲ. ನಾವು ಕೊನೆಯ ಕಾಲದ ಹತ್ತಿರ ಬರುವ ಹಾಗೆ ಇಂತಹ ಮೋಸಗಳು ಇನ್ನೂ ಹೆಚ್ಚಾಗುತ್ತವೆ.

ಮತ್ತೆ, ನಮ್ಮ ನಂಬಿಕೆಯ ದೃಢತೆಯ ಹಿನ್ನಲೆಯಲ್ಲಿ, ಯೇಸುವು ಈ ಲೋಕದ ಸ್ಥಿತಿಯ ಕುರಿತಾಗಿ ಏನು ಹೇಳುತ್ತಾನೆ ನೋಡಿರಿ. ಕ್ರಿಸ್ತನ ಕಾಲ ಮೊದಲುಗೊಂಡು ಚರಿತ್ರೆಯ ಬೇರೆ ಬೇರೆ ಕಾಲಗಳಲ್ಲಿ, ಜನರು ತಮ್ಮ ಕಷ್ಟಗಳನ್ನು ದೂರ ಮಾಡುವ ಅಥವಾ ಅವುಗಳನ್ನು ಕಡಿಮೆ ಮಾಡುವ ವಿಚಾರಗಳಲ್ಲಿ ನಂಬಿಕೆಯನ್ನು ಇಟ್ಟಿದ್ದಾರೆ. ಅದು ರಾಜಕೀಯ ವಿಚಾರವಾಗಿರಲಿ ಅಥವಾ ತಂತ್ರಜ್ಞಾನ ವಿಚಾರವಾಗಿರಲಿ ಅಥವಾ ವಿಜ್ಞಾನದ ವಿಚಾರವಾಗರಲಿ ಅಥವಾ ತರ್ಕವಾಗಿರಲಿ ಒಂದಲ್ಲ ಅನೇಕ ಬಾರಿ ಜನರು ಈ ಲೋಕದಲ್ಲಿ ಶಾಂತಿಯು ನೆಲೆಸುತ್ತದೆ ಎಂದು ಬಯಸುತ್ತಾರೆ. ಆದರೆ ಚರಿತ್ರೆಯ ದುಃಖದ ಚಿತ್ರಣ ನಮಗೆ ತೋರಿಸುವ ಹಾಗೆ ಈ ನಿರೀಕ್ಷೆಗಳು ಮತ್ತೆ ಮತ್ತೆ ಹುಸಿಯಾಗಿವೆ. ಈ ದಿನದ

ಲೋಕವು ಕ್ರಿಸ್ತನು ಹೇಳಿದ ಹಾಗೆ ಇರುತ್ತದೆ. ಎರಡು ಸಾವಿರ ವರ್ಷಗಳ ಹಿಂದೆ ಕ್ರಿಸ್ತನು ಹೇಳಿದ ಹಾಗೆ ನಮ್ಮ ನಿರೀಕ್ಷೆಗಳು ಯಾವ ರೀತಿಯಲ್ಲಿ ದಿಕ್ಕು ತಪ್ಪಿ ಹೋಗುತ್ತಿವೆ ಎಂಬುದನ್ನು ಗಮನಿಸಬಹುದು.

**ಮತ್ತಾಯ 24;25 ನ್ನು ಓದಿರಿ. ನಂಬಿಕೆಯನ್ನು ಧೃಢಪಡಿಸಲು ಈ ಮಾತುಗಳಿಂದ ನಾವು ಏನು ಕಲಿಯಬಹುದು.?**

**ಸೋಮವಾರ**

## ಕೊನೆಯವರೆಗೂ ತಾಳಿಕೊಳ್ಳುವುದು

**ಮತ್ತಾಯ 24:9 ಮತ್ತು ಪ್ರಕಟಣೆ 13:11–17 ನ್ನು ಓದಿರಿ. ಮತ್ತಾಯದಲ್ಲಿ ಯೇಸುವು ಹೇಳಿದ ವಿಚಾರಗಳಿಗೂ ಮತ್ತು ಪ್ರೇರಣೆಗೊಂಡ ಯೋಹಾನನು ಪ್ರಕಟಣೆಯಲ್ಲಿ ತಿಳಿಸಿರುವ ವಿಚಾರಗಳಿಗೆ ಯಾವ ರೀತಿಯ ಸಾಮ್ಯತೆಯನ್ನು ನೋಡಬಹುದು.**

______________________________

______________________________

ಜಾಗತಿಕವಾಗಿ ದೇಶಗಳು ನಿಜವಾದ ಆರಾಧನೆಯನ್ನು ವಿಸರ್ಜಿಸಿ ಸುಳ್ಳಿನ ಆರಾಧನೆಯನ್ನು ಲೋಕದ ಮೇಲೆ ಬಲವಂತವಾಗಿ ಹೇರುವುದನ್ನು ಸಮಯದಲ್ಲಿ ತನ್ನ ಜನರಿಗಾಗಿ ಇರುವ ಕ್ರಿಸ್ತನ ಕಾಳಜಿಯನ್ನು ಗಮನಿಸಿರಿ. ಯಾರು ಸ್ಥಿರವಾಗಿ ನಿಲ್ಲುವರೋ ಅವರು ದ್ವೇಷವನ್ನು, ಕಷ್ಟಗಳನ್ನು ಮತ್ತು ಸಾವನ್ನು ಕೂಡ ಅನುಭವಿಸಬೇಕಾಗುತ್ತದೆ.

**ಮತ್ತಾಯ 24:13 ನ್ನು ಓದಿರಿ. ಲೋಕದ ಎಲ್ಲಾ ಕಡೆಗಳಲ್ಲೂ ವಿರೋಧತೆ ಇದ್ದರೂ ಕೂಡ ನಾವು ನಂಬಿಗಸ್ತರಾಗಿದ್ದು ರಕ್ಷಿಸಲ್ಪಡಲು ಯಾವುದು ಬಹಳ ಮುಖ್ಯವಾದದ್ದು?**

______________________________

"ಯಾರು ತಮ್ಮ ಮನಸ್ಸುಗಳ ಸುತ್ತ ಸತ್ಯವೇದದ ಸತ್ಯಗಳಿಂದ ಕೋಟೆಯನ್ನು ನಿರ್ಮಿಸಿಕೊಂಡಿರುವರೋ ಅವರು ಮಾತ್ರ ಕೊನೆಯ ಕಾಲದ ಕಷ್ಟಗಳನ್ನು ಎದುರಿಸಲು ಸಮರ್ಥರು" **ಎಲೆನ್ ಜಿ ವೈಟ್, ಮಹಾ ಹೋರಾಟ ಪುಟ 493, 494**. ಈ ಮಾತಿನ ಪ್ರಕಾರ ಯಾರು ತಮ್ಮ ಮನಸ್ಸುಗಳ ಸುತ್ತಲೂ ದೇವರ ವಾಕ್ಯದ ಕೋಟೆಯನ್ನು ನಿರ್ಮಿಸಿಕೊಂಡಿರುವರೋ ಅವರು ಕೊನೆಯ ಕಾಲದ ಮೋಸಗಳಿಗೆ ಬಿದ್ದು ಹೋಗುವುದಿಲ್ಲ. ಈ ಸಮಯದ ಸತ್ಯದಲ್ಲಿ ಅವರು ಸ್ಥಿರವಾಗಿ ನಿಂತಿದ್ದಾರೆ, ಮೋಸಗಳು ಅವರನ್ನು ದಾಟಿ ಹೋಗುತ್ತವೆ.

**ಮತ್ತಾಯ 7:24–27 ನ್ನು ಓದಿರಿ. ದೇವರಲ್ಲಿ ನಂಬಿಕೆಯಾಗಿ ನಿಲ್ಲಲು ಇನ್ನೂ ಏನು ಮಹತ್ವವಾಗಿ ಬೇಕಾಗಿರುತ್ತದೆ.?**

________________________________________

________________________________________

ನಾವು ಎದುರಿಸುವ ಕಷ್ಟಗಳಲ್ಲಿ ಸ್ಥಿರವಾಗಿ ನಿಲ್ಲಲು ದೇವರ ವಾಕ್ಯದ ಜ್ಞಾನ ಮಾತ್ರವೇ ನಮಗೆ ಸಾಲದು ಎಂದು ಕ್ರಿಸ್ತನು ನಮಗೆ ತಿಳಿಸುತ್ತಾನೆ. ನಾವು ಏನು ಕಲಿತಿದ್ದೆವೋ ಅದನ್ನು ಕಾರ್ಯರೂಪದಲ್ಲಿ ಮಾಡಿ ತೋರಿಸಬೇಕು; ಅಂದರೆ ನಾವು ಕ್ರಿಸ್ತನಲ್ಲಿ ತೋರಿಬರುವ ವಾಕ್ಯಕ್ಕೆ ವಿಧೇಯತೆಯನ್ನು ತೋರಿಸಬೇಕು. ಈ ಮೇಲಿನ ಸಾಮ್ಯದಲ್ಲಿ ಮನೆಯನ್ನು ಕಟ್ಟುವ ಇಬ್ಬರೂ ಕೂಡ ಕ್ರಿಸ್ತನ ಮಾತನ್ನು ಕೇಳಿದರು ಅವರಿಬ್ಬರಲ್ಲಿರುವ ವ್ಯತ್ಯಾಸವೆಂದರೆ ನಿಲ್ಲುವುದು ಮತ್ತು ನಿಲ್ಲದೆ ಹೋಗುವುದು, ಇದರಲ್ಲಿ ಕ್ರಿಸ್ತನು ಹೇಳಿರುವುದನ್ನು ವಿಧೇಯತೆಯಿಂದ ಪಾಲಿಸುವುದು ಮುಖ್ಯವಾಗಿದೆ.

**ಯಾಕೆ ಯಾರು ವಿಧಯರಾಗಿರುವರೋ ಅವರು ನಿಲ್ಲುವರು ಮತ್ತು ಯಾರು ವಿಧೇಯರಾಗಿರುವುದಿಲ್ಲವೋ ಅವರು ಬಿದ್ದು ಹೋಗುವರು? ನಂಬಿಕೆಯಲ್ಲಿ ನಿಲ್ಲಲು ವಿಧೆಯತೆಯು ಹೇಗೆ ಸಹಾಯ ಮಾಡುತ್ತದೆ.**

ಮಂಗಳವಾರ

## ಹಾಳು ಮಾಡುವ ಅಸಹ್ಯ ವಸ್ತು

ಕೊನೆಯ ಕಾಲದ ಕುರಿತಾಗಿ ಹೇಳಿದ ತನ್ನ ದೀರ್ಘವಾದ ಭಾಷಣದಲ್ಲಿ ಕ್ರಿಸ್ತನು ಹಾಳು ಮಾಡುವ ಅಸಹ್ಯ ವಸ್ತು (ಮತ್ತಾಯ 24:15) ದಾನಿಯೇಲನ ಪುಸ್ತಕದಿಂದ ಬರುವ ಚಿತ್ರಣವನ್ನು ವಿವರಿಸುತ್ತಾನೆ (ದಾನಿಯೇಲ 9:27, 11:31, 12:11).

ದೇವರು ತನ್ನ ಆಜ್ಞೆಯನ್ನು ಮೀರುವುದನ್ನು ಅಸಹ್ಯ ಎಂದು ಪ್ರಕಟಿಸಿದ್ದಾನೆ. ಇದರಲ್ಲಿ ವಿಗ್ರಹರಾಧನೆ (ಧರ್ಮೋಪದೇಶಕಾಂಡ 27:15) ಅಥವಾ ಲೈಂಗಿಕ ಅಭ್ಯಾಸಗಳು (ಯಾಜಕಕಾಂಡ 18:22). ಆದ್ಧರಿಂದ ಹಾಳು ಮಾಡುವ ಅಸಹ್ಯ ವಸ್ತು ಎಂದರೆ ಒಂದು ರೀತಿಯ ಧಾರ್ಮಿಕ ವಿರೋಧತೆ.

**ಮತ್ತಾಯ 24:15 ಮತ್ತು ಲೂಕ 21:20ನ್ನು ಓದಿರಿ. ಹಾಳು ಮಾಡುವ ಅಸಹ್ಯ ವಸ್ತು ವಿನ ಕುರಿತಾಗಿ ಯೇಸುವು ಹೇಳುವ ವಿಚಾರವನ್ನು ಅರ್ಥಮಾಡಿಕೊಳ್ಳಲು ಈ ವಚನಗಳು ನಮಗೆ ಹೇಗೆ ಸಹಾಯ ಮಾಡುತ್ತವೆ.?**

ಈ ಎರಡೂ ವಚನಗಳು ಕ್ರಿ.ಶ 70 ರಲ್ಲಿ ಯೇರುಷಲೆಮಿನ ಮೇಲೆ ಬರಲಿರುವ ವಿನಾಶದ ಕುರಿತಾಗಿ ಯೇಸುವು ಹೇಳಿದ ಪ್ರವಾದನೆಯ ಕುರಿತಾಗಿ ತಿಳಿಸುತ್ತವೆ. ರೋಮ್ ಸಾಮ್ರಾಜ್ಯ ನಗರವನ್ನು ಮಾತ್ರವಲ್ಲದೆ ಪವಿತ್ರವಾದ ಆಲಯವನ್ನು ಕೂಡ ಹಾಳು ಮಾಡುವುದರ ಕುರಿತಾಗಿ ತಿಳಿಸುತ್ತದೆ.

ಈ ಪ್ರವಾದನೆಯ ಎರಡನೇಯ ನೆರವೇರಿಕೆಯನ್ನು ಕುರಿತಾಗಿ ನೋಡುವುದದಾರೆ ಅದು ಯೇರುಷಲೆಮಿನ ಆ ಸಮಯದ ನಾಶನದ ಕುರಿತಾಗಿ ತಿಳಿಸುತ್ತದೆ. ಇದು ಕೊನೆಯ ಕಾಲದಲ್ಲಿ ನಡೆಯುವ ಘಟನೆಗಳಿಗೆ ಮಾದರಿಯಾಗಿ

ನಿಲ್ಲುತ್ತದೆ. **"ಲೋಕವು ತನ್ನನ್ನು ತಾನು ಕಠಿಣ ಪಡಿಸಿಕೊಳ್ಳುವ ಹಾಗೂ ಅಪನಂಬಿಕೆಯ ಮತ್ತು ವಿರೋಧತೆಯಲ್ಲಿ ಮುಳುಗಿ ದೇವರ ನ್ಯಾಯ ತೀರ್ಪನ್ನು ಮತ್ತು ಶಿಕ್ಷೆಯನ್ನು ಎದುರಿಸುವ ರೀತಿಯಲ್ಲಿ ಕ್ರಿಸ್ತನು ಯೇರುಷಲೆಮನ್ನು ಸಾದೃಶ್ಯವಾಗಿ ನೋಡಿದನು". ಎಲೆನ್ ಜಿ ವೈಟ್, ಮಹಾ ಹೋರಾಟ, ಪುಟ 22, 23**.

ದಾನಿಯೇಲ 12:11 ಮತ್ತು ದಾನಿಯೇಲ 11:31 ರಲ್ಲಿ ಹಾಳು ಮಾಡುವ ಅಸಹ್ಯ ವಸ್ತು ವು ರೋಮ್ ಸಾಮ್ರಾಜ್ಯದ ಅಂತ್ಯದ ಕಾಲದಲ್ಲಿ ಕಾಣಿಸಿಕೊಳ್ಳುತ್ತದೆ. ಧಾರ್ಮಿಕ ರೋಮ್ ನಲ್ಲಿ ಇದು ಮಧ್ಯಸ್ಥಿಕೆಯ ವ್ಯವಸ್ಥೆ ಮತ್ತು ರಕ್ಷಣೆಯ ವಿಚಾರದಲ್ಲಿ ಕಾಣಿಸುತ್ತದೆ. ಇದು ಕ್ರಿಸ್ತನು ನಮಗಾಗಿ ಏನು ಮಾಡಿದ್ದಾನೆ ಮತ್ತು ಈಗ ಪರಲೋಕದಲ್ಲಿ ಆತನು ನಮಗಾಗಿ ಏನು ಮಾಡುತ್ತಿದ್ದಾನೆ ಎಂಬುದನ್ನು ಅಳಿಸಿಹಾಕಲು ಪ್ರಯತ್ನಿಸುತ್ತದೆ.

ದಾನಿಯೇಲ 8, ಅದರಲ್ಲೂ ಮುಖ್ಯವಾಗಿ 9–12 ವಚನಗಳು, ಈ ಘಟನೆಗಳನ್ನು ಚರಿತ್ರೆಯ ಸರಿಯಾದ ಹಿನ್ನಲೆಯಲ್ಲಿ ಸೇರಿಸಲು ಸಹಾಯ ಮಾಡುತ್ತವೆ, ರೋಮ್ ನ ಎರಡು ಅಧಿಕಾರಗಳಲ್ಲಿ, ಮೊದಲನೇಯ ಹಂತದಲ್ಲಿ , ಚಿಕ್ಕ ಕೊಂಬು ತನ್ನ ಅಧಿಕಾರವನ್ನು ಲೋಕದ ಉದ್ದಕ್ಕೂ ಚಾಚುವುದನ್ನು ನಾವು ನೋಡುತ್ತೇವೆ. (ದಾನಿಯೇಲ 8:9), ಇದು ರೋಮ್ ಸಾಮ್ರಾಜ್ಯದ ವಿಸ್ತೀರ್ಣತೆಯನ್ನು ತೋರಿಸುತ್ತದೆ. ಎರಡನೇಯ ಹಂತದಲ್ಲಿ (ದಾನಿಯೇಲ 8:10–12) ಚಿಕ್ಕ ಕೊಂಬು ಉದ್ದಕ್ಕೆ ಬೆಳೆಯುವುದನ್ನು ನಾವು ನೋಡುತ್ತೇವೆ. ಆಕಾಶದ ಕೆಲವು ನಕ್ಷತ್ರಗಳನ್ನು ಬೀಳಿಸುವ (ದೇವರ ಮಕ್ಕಳನ್ನು ಹಿಂಸಿಸುವ) ಮಟ್ಟಿಗೆ ಬೆಳೆಯುತ್ತದೆ ಮತ್ತು ಗಣದ ಅಧಿಪತಿಯನ್ನು (ಯೇಸುವನ್ನು) ಎದುರಿಸುವಷ್ಟು ಮಟ್ಟಿಗೆ ಉಬ್ಬಿಕೊಳ್ಳುವುದನ್ನು (ದಾನಿಯೇಲ 8:11), ಇದು ಧಾರ್ಮಿಕ ರೋಮ್ ನ್ನು ಪ್ರತಿನಿಧಿಸುತ್ತದೆ, ಇದು ರಾಜಕೀಯ ರೋಮ್ ನ ಪತನದ ನಂತರ ಬರುತ್ತದೆ ಆದರೆ ಅದು ರೋಮ್ ಸಾಮ್ರಾಜ್ಯವಾಗಿಯೇ ಉಳಿಯುತ್ತದೆ. (ಅದಕ್ಕಾಗಿಯೇ ಒಂದು ಗುರುತು ಚಿಕ್ಕ ಕೊಂಬು ಇದು ಎರಡೂ ಅಂದರೆ ಧಾರ್ಮಿಕ ಮತ್ತು ರಾಜಕೀಯ ರೋಮ್ ನ್ನು ಸೂಚಿಸುತ್ತದೆ.)

ದಾನಿಯೇಲ 7:9,10, ರಲ್ಲಿ ಹೇಳಲಾಗಿರುವ ನ್ಯಾಯತೀರ್ಪು ದಾನಿಯೇಲ 8:14 ರಲ್ಲಿ ಇರುವ ಆಲಯದ ಶುದ್ಧೀಕರಣ ಮತ್ತು ಮತ್ತಾಯ 24:29 ರಲ್ಲಿ ತಿಳಿಸಲಾಗಿರುವ ಪರಲೋಕದಲ್ಲಿನ ಸೂಚನೆಗಳು ಎಲ್ಲವೂ ಕೂಡ ಕೊನೆಯ ಕಾಲದಲ್ಲಿ ದೇವರು ತನ್ನ ಮಕ್ಕಳ ಪರವಾಗಿ ತಾನು ಮಾಡುವ ಮಧ್ಯಸ್ಥಿಕೆಯ ಕುರಿತಾಗಿ ತಿಳಿಸುತ್ತವೆ.

**ಬುಧವಾರ**

## ಹತ್ತು ಮಂದಿ ಕನ್ಯೆಯರು

**ಮತ್ತಾಯ 24 ರಲ್ಲಿ ತನ್ನ ಬರೋಣದ ಕುರಿತಾದ ಸೂಚನೆಗಳ ಕುರಿತಾಗಿ ಮಾತನಾಡಿದ ನಂತರ ಮತ್ತಾಯ 25 ರಲ್ಲಿ ಯೇಸುವು ಅದಕ್ಕಾಗಿ ಹೇಗೆ ಸಿದ್ದರಾಗಬೇಕು ಎಂದು ತಿಳಿಸುತ್ತಾನೆ.**

ಮತ್ತಾಯ 25:1–13 ರಲ್ಲಿ ಇರುವ ಹತ್ತು ಮಂದಿ ಕನ್ಯೆಯರ ಕುರಿತಾಗಿ ಓದಿರಿ. ಆತನ ಬರೋಣಕ್ಕಾಗಿ ನಾವು ಯಾವ ರೀತಿಯ ಸಿದ್ದತೆಯನ್ನು ಮಾಡಿಕೊಳ್ಳಬೇಕು ಎಂದು ಯೇಸು ಏನು ಹೇಳುತ್ತಾನೆ ಎಂಬುದನ್ನು ನಾವು ಹೇಗೆ ಅರ್ಥ ಮಾಡಿಕೊಳ್ಳಬಹುದು?

________________________________________

________________________________________

ಯೇಸುವು ತನ್ನ ಸಂಭಾಷಣೆಯನ್ನು ಹತ್ತು ಮಂದಿ ಕನ್ಯೆಯರ ಕುರಿತಾಗಿ ಮಾತನಾಡುತ್ತಾ ಆರಂಭಿಸುತ್ತಾನೆ. ಕನ್ಯೆ ಎಂದು ಕರೆಸಿಕೊಳ್ಳಬೇಕಾದರೆ ಅವರು ಮೊದಲು ಕ್ರೈಸ್ತವರಾಗಿರಬೇಕು. ಮಹಾ ಹೋರಾಟದಲ್ಲಿ ಅವರು ಸೈತಾನ ಪಕ್ಷದಲ್ಲಿ ಇರುವವರಲ್ಲ, ಅವರು ಪರಲೋಕ ರಾಜ್ಯಕ್ಕೆ ಸೇರಿದವರಾಗಿಬೇಕು. (ಮತ್ತಾಯ 25:11). ಆದರೆ ಕೊನೆಯ ಕಾಲದಲ್ಲಿ ಅವರೆಲ್ಲರೂ ನಿದ್ದೆ ಮಾಡಿದರು (ಮತ್ತಾಯ 25:5) ಯೇಸುವು ಎಚ್ಚರಿಕೆಯಾಗಿರಬೇಕು ಎಂದು ಮುಂಚೆಯೇ

ತಿಳಿಸಿದ್ದನು (ಮತ್ತಾಯ 24:42), ಅಥವಾ ಆತನು ತಿರುಗಿ ಬರುವಾಗ ಅವರು ಸಿದ್ದರಾಗಿ ಇರುವುದಕ್ಕಾಗಿ ಅವರು ಎಚ್ಚರಿಕೆಯಾಗಿರಬೇಕು ಎಂದು ತಿಳಿಸಿದ್ದನು.

ಹತ್ತು ಮಂದಿ ಕನ್ಯೆಯರ ಕೈಯಲ್ಲಿ ಆರತಿಗಳು ಇದ್ದವು, ಮತ್ತು ಎಲ್ಲರೂ ಕೂಡ ಮದಲಿಂಗನನ್ನು ಎದುರುಗೊಳ್ಳಲು ಹೊರಟರು, ಇದರ ಅರ್ಥವೆಂದರೆ ಅವರೆಲ್ಲರೂ ಕೂಡ ಆತನ ಬರೋಣಕ್ಕಾಗಿ ಕಾಯುತ್ತಿದ್ದರು. ಅಲ್ಲಿ ವಿಳಂಬವಾಯಿತು. ಆತನ ಬರೋಣಕ್ಕಾಗಿ ಕಾಯುತ್ತಿದ್ದ ಈ ವಿಶ್ವಾಸಿಗಳು ನಿದ್ರೆಗೆ ಜಾರಿದರು. ತಕ್ಷಣ ಆ ರಾತ್ರಿಯಲ್ಲಿ ಅವರೆಲ್ಲರೂ ಕೂಡ ಎಚ್ಚರಗೊಂಡರು, ಮದಲಿಂಗನು ಬರುತ್ತಿದ್ದಾನೆ (ಮತ್ತಾಯ 25:1–6).

ಬುದ್ದಿಹೀನ ಕನ್ಯೆಯರು ಬೆಚ್ಚಿಬಿದ್ದರು, ಅವರು ಸಿದ್ದರಾಗಿರಲಿಲ್ಲ. ಯಾಕೆ? ಒಂದು ವ್ಯಾಖ್ಯಾನ ಹೇಳುವ ಹಾಗೆ ನಮ್ಮ ಆರತಿಗಳು ಆರಿಹೋಗಿವೆ (ಮತ್ತಾಯ 25:8). ಇತರೆ ವ್ಯಾಖ್ಯಾನಗಳು ಮೂಲ ಗ್ರೀಕ್ ಭಾಷೆಗೆ ಹತ್ತಿರವಾಗಿ ಹೇಳುವ ಹಾಗೆ ದೀಪಗಳು ಬತ್ತಿಹೋಗಿದ್ದವು ಆರತಿಯ ಕೊನೆಯ ಮಿನುಗುವಿಕೆ ಇನ್ನೂ ಕಾಣುತ್ತಿತ್ತು. ಅವರಲ್ಲಿ ಇನ್ನೂ ಸ್ವಲ್ಪ ಎಣ್ಣೆ ಮಾತ್ರ ಉಳಿದಿತ್ತು, ಆದರೆ ಕ್ರಿಸ್ತನನ್ನು ಎದುರುಗೊಳ್ಳುವಷ್ಟು ಬೆಳಕು ಅವರಲ್ಲಿ ಇರಲಿಲ್ಲ.

**ಹಾಗಾದರೆ, ಸಮಸ್ಯೆ ಏನು?**

ಈ ಕನ್ಯೆಯರು ಕ್ರಿಸ್ತನ ಬರೋಣಕ್ಕಾಗಿ ಎದುರುನೋಡುವ ಕ್ರೈಸ್ತರಾಗಿದ್ದಾರೆ, ಆದರೆ ಆದರ ವಿಶೇಷವಾದ ಶಕ್ತಿಯನ್ನು ಹೊಂದದವರಾಗಿದ್ದಾರೆ. ಅವರಲ್ಲಿ ಸ್ವಲ್ಪ ಎಣ್ಣೆ ಇದೆ, ಆತ್ಮನು ಸ್ವಲ್ಪ ಮಟ್ಟಿಗೆ ಅವರಲ್ಲಿ ಕೆಲಸ ಮಾಡುತ್ತಾನೆ, ಆದರೆ ಅದು ಸ್ವಲ್ಪ ಮಾತ್ರ ಮಿನುಗುತ್ತದೆ. ಅವರಿಗೆ ಹೆಚ್ಚಿಗೆ ಬೇಕಾಗಿದ್ದರೂ ಕೂಡ ಅವರಲ್ಲಿದ್ದ ಸ್ವಲ್ಪದರಲ್ಲೇ ಅವರು ತೃಪ್ತರಾಗಿದ್ದರೂ.

**ಪರಿಶುದ್ಧಾತ್ಮನು ಮನುಷ್ಯನ ಹೃದಯದಲ್ಲಿ ಕೆಲಸ ಮಾಡುತ್ತಾನೆ, ಅವನ ಆಸಕ್ತಿ ಮತ್ತು ಅವನ ಒಪ್ಪಿಗೆಯ ಮೇರೆಗೆ ಅವನಲ್ಲಿ ಹೊಸ ಸ್ವಭಾವವನ್ನು ತರಲು ಪ್ರಯತ್ನ ನಡೆಸುತ್ತಾನೆ.ಆದರೆ ಬುದ್ದಿಹೀನ ಕನ್ಯೆ ಯರ ಗುಂಪಿನ ಜನರು ಬಾಹ್ಯ**

**ಶಕ್ತಿಯಲ್ಲಿ ತೃಪ್ತರಾಗಿರುತ್ತಾರೆ. ಅವರಿಗೆ ದೇವರ ಪರಿಚಯವಿರುವುದಿಲ್ಲ. ಅವರು ಆತನ ಸ್ವಭಾವವನ್ನು ತಿಳಿದುಕೊಂಡಿಲ್ಲ; ಅವರು ಆತನ ಜೊತೆಗೆ ಸಂಭಾಷಣೆಯನ್ನು ನಡೆಸಿಲ್ಲ; ಆದ್ದರಿಂದ ಅವರು ಆತನಲ್ಲಿ ನಂಬಿಕೆ ಇಡುವುದಿಲ್ಲ, ನೋಡಿ ಜೀವಿಸುವುದರ ಕುರಿತಾಗಿ ಅವರಿಗೆ ತಿಳಿದಿಲ್ಲ.ದೇವರಿಗೆ ಅವರು ಸಲ್ಲಿಸುವ ಸೇವೆಯು ಒಂದು ವಿಧವಾದ ಆಚರಣೆಯಾಗಿರುತ್ತದೆ.** ಎಲೆನ್ ಜಿ, ವೈಟ್ ಕ್ರೈಸ್ಟ್ ಆಬ್ಜೆಕ್ಟ್ ಲೆಸೆನ್ಸ್, ಪುಟ 411.

**ಈ ಜನರು ಮಾಡಿದ ತಪ್ಪುಗಳನ್ನು ನಾವು ಮಾಡದೆ ಇರುವ ಹಾಗೆ ನಾವು ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳು ಯಾವವು? ಅವರ ಪಾತ್ರಗಳಲ್ಲಿ ನಮ್ಮನ್ನು ಊಹಿಸಿಕೊಂಡರೆ ಎಲ್ಲಿ ನಾವು ಬದಲಾವಣೆ ಹೊಂದಬಹುದು?**

**ಗುರುವಾರ**

## ನಿಮ್ಮ ತಲಾಂತುಗಳನ್ನು ಉಪಯೋಗಿಸುವುದು

**ಮತ್ತಾಯ 25:13–30 ನ್ನು ಓದಿರಿ. ಕ್ರಿಸ್ತನ ಬರೋಣಕ್ಕಾಗಿ ಸಿದ್ಧರಾಗಿರುವುದರಲ್ಲಿ ನಮ್ಮ ತಲಾಂತುಗಳನ್ನು ಉಪಯೋಗಿಸುವುದು ಯಾವ ಪಾತ್ರವನ್ನು ವಹಿಸುತ್ತದೆ?**

______________________________________

______________________________________

ಯೇಸುವು ಈ ಹಿಂದೆ ಹೇಳಿದ ಸಾಮ್ಯವು ಇದಕ್ಕಿಂತ ಭಿನ್ನವಾಗಿದ್ದರೂ ಕೂಡ ಎರಡೂ ಸಾಮ್ಯಗಳು ಆತನ ಬರೋಣಕ್ಕಾಗಿ ಸಿದ್ಧತೆಯ ಕುರಿತಾಗಿ ಮಾತನಾಡುತ್ತವೆ. ಎರಡೂ ಕೂಡ ಸಿದ್ಧರಾಗಿರುವ ಮತ್ತು ಸಿದ್ಧರಾಗದೆ ಇರುವವರ ಕುರಿತಾಗಿ ಮಾತನಾಡುತ್ತಾರೆ. ಎರಡೂ ಕೂಡ ಕೆಲವರು ತಮ್ಮ ಸ್ವಂತ ಆತ್ಮಿಯ ನಿರ್ಲಕ್ಷತೆಯಿಂದ ದೇವರ ರಾಜ್ಯಕ್ಕೆ ದೂರವಾಗಿ ನಿತ್ಯ ನಾಶನಕ್ಕೆ ಗುರಿಯಾಗುತ್ತಾರೆ.

ಹತ್ತು ಕನ್ಯೆಯರಲ್ಲಿ ಎಣ್ಣೆಯು ಹೇಗೆ ಪರಿಶುದ್ದಾತ್ಮನನ್ನು ಸೂಚಿಸುತ್ತದೋ ಅದೇ ರೀತಿಯಲ್ಲಿ ಗಂಟು ಅಥವಾ ಚಿನ್ನದ ಗಂಟು ( ಮತ್ತಾಯ 25:15)

**"ತಲಾಂತುಗಳನ್ನು ಸೂಚಿಸುತ್ತದೆ. ಇದಕ್ಕೆ ಮೂಲ ಗ್ರೀಕ್ ಭಾಷೆಯಲ್ಲಿ ತಲಾಂತಾ ಎಂದು ಹೇಳುತ್ತಾರೆ. "ತಲಾಂತುಗಳು ಆತ್ಮನ ವಿಶೇಷವಾದ ವರಗಳನ್ನು ಸೂಚಿಸುತ್ತವೆ, ಇವು ಎಲ್ಲಾ ಸ್ವಾಭಾವಿಕವಾದ ವರಗಳನ್ನು ಒಳಗೊಂಡಿರುತ್ತವೆ". ಎಸ್ ಡಿ ಎ ಬೈಬಲ್ ಕಾಮೆಂಟರಿ, ಸಂಪುಟ 5, ಪುಟ 510.**

ಎಲ್ಲಾ ಸೇವಕರು ಕೂಡ ಯಜಮಾನನಿಂದ ಒಳ್ಳೆಯ ಬಹುಮಾನಗಳನ್ನು ಪಡೆದುಕೊಂಡರು. ಗಮನಿಸಿರಿ, ಅವರು ಕೂಡ ಯಜಮಾನನಿಗೆ ಸೇರಿದವರಾಗಿದ್ದರು (ಮತ್ತಾಯ 25:14), ಅವರವರ ಸಾಮರ್ಥ್ಯಕ್ಕೆ ತಕ್ಕ ಹಾಗೆ ಅವರಿಗೆ ತಲಾಂತುಗಳನ್ನು ನೀಡಲಾಗಿತ್ತು (ಮತ್ತಾಯ 25:15) ಅವರಿಗೆ ನೀಡಲಾಗಿದ್ದ ತಲಾಂತುಗಳು ನಂಬಿಕೆಯನ್ನು ತೋರಿಸುತ್ತಿತ್ತು. ಈ ಪಾರುಪತ್ಯಗಾರರು ಅವರ ಸ್ವಂತದ್ದಲ್ಲದ ವಸ್ತುಗಳ ಮೇಲೆ ಜವಾಬ್ದಾರಿಯನ್ನು ಹೊಂದಿದ್ದರು. ಅದಕ್ಕಾಗಿಯೇ ಯಜಮಾನನು ಹಿಂತಿರುಗಿ ಬಂದಾಗ ಅವರ ಲೆಕ್ಕವನ್ನು ಪರೀಕ್ಷಿಸಿದನು(ಮತ್ತಾಯ 25:19).

ಆತ್ಮೀಯ ವರಗಳು ಪರಿಶುದ್ಧಾತ್ಮನಿಂದ ಬರುತ್ತವೆ (1 ಕೊರಿಂಥ 121–11,28–31; ಎಫೆಸ 4:11). ಯಾರು ತಮ್ಮ ಬಳಿಯಲ್ಲಿ ಯಾವ ವರವೂ ಕೂಡ ಇಲ್ಲ ಎಂದು ಆಲೋಚಿಸುವವರಿಗೆ ಒಂದು ಒಳ್ಳೆಯ ಸುದ್ದಿಯಿದೆ. ವರಗಳನ್ನು ಕೊಡುವವರಲ್ಲಿದೆ ಯಾರು ಕೂಡ ಪಡೆಯಲು ಸಾಧ್ಯವಿಲ್ಲ. ಆದ್ದರಿಂದ, ಈ ಜನರು ವರಗಳನ್ನು ಹೊಂದಿದ್ದಾರೆ ಇದಕ್ಕಿಂತ ಹೆಚ್ಚಾಗಿ ಪರಿಶುದ್ಧಾತ್ಮನ ವರವನ್ನು ಹೊಂದಿದ್ದಾರೆ.

ಕ್ರಿಸ್ತನಲ್ಲಿ ಈ ವರಗಳು ನಮ್ಮದಾಗಿವೆ, ಆದರೆ ಅವುಗಳನ್ನು ಹೊಂದಬೇಕಾದರೆ ನಾವು ಹೇಗೆ ಪರಿಶುದ್ಧಾತ್ಮನ ಜೊತೆಯಲ್ಲಿ ನಮ್ಮ ಸಂಬಂಧವನ್ನು ಹೊಂದುತ್ತೇವೆ ಮತ್ತು ಆತನಿಗೆ ಹೇಗೆ ನಾವು ಶರಣಾಗುತ್ತೇವೆ ಎಂಬುದರ ಮೇಲೆ ಅವಲಂಬಿಸುತ್ತದೆ. ಇಲ್ಲಿಯೇ ಅಪ್ರಯೋಜಕನಾದ ಸೇವಕನು ತಪ್ಪು ಮಾಡಿದನು. ಅವನಿಗೆ ವರವನ್ನು ನೀಡಲಾಗಿತ್ತು ಆದರೆ ಅವನು ಅದನ್ನು ಉಪಯೋಗಿಸಲಿಲ್ಲ. ಅವನಿಗೆ ಕೃಪೆಯಿಂದ ನೀಡಲಾಗಿದ್ದ ವರವನ್ನು ಉಪಯೋಗಿಸದೆ ಇಟ್ಟುಕೊಂಡಿದ್ದನು. ಇದರ ಪಲಿತಾಂಶ ಯೇಸುವು ಅವನನ್ನು ದುಷ್ಟ ಮತ್ತು

ಸೋಮಾರಿ ಎಂದು ಕರೆದನು. ಮತ್ತಾಯ 25:26) ಒಂದು ಬಲವಾದ ಖಂಡನೆ.

ಯೇಸುವು ಈ ಸಾಮ್ಯವನ್ನು ಆತನ ಬರೋಣದ ಕೊನೆಯ ದಿನಗಳ ಕುರಿತಾದ ಹಿನ್ನಲೆಯಲ್ಲಿ ಹೇಳಿದನು. ಇದು ನಮಗೆ ಏನು ಕಲಿಸುತ್ತದೆ, ಹಾಗಾದರೆ ಕೊನೆಯ ದಿನಗಳ ಸಿದ್ದತೆಗಾಗಿ ನಮ್ಮ ವರಗಳನ್ನು ಹೇಗೆ ಉಪಯೋಗಿಸುವುದರ ಕುರಿತಾಗಿ ಇದು ಏನು ತಿಳಿಸುತ್ತದೆ

ಶುಕ್ರವಾರ

ಮುಂದಿನ ಆಲೋಚನೆಗಾಗಿ : "ಒಂದು ತಲಾಂತು ಪಡೆದ ಮನುಷ್ಯನು ಹೋಗಿ ಅದನ್ನು ಬಚ್ಚಿಟ್ಟನು ಅವನು ತನ್ನ ಯಜಮಾನನ ಹಣವನ್ನು ಬಚ್ಚಿಟ್ಟನು

ಕಡಿಮೆ ಹಣವನ್ನು ಪಡೆದುಕೊಂಡ ಮನುಷ್ಯನು ಅದನ್ನು ಉಪಯೋಗಿಸಲಿಲ್ಲ. ಇದು ತಮಗೆ ಕಡಿಮೆ ಜವಾಬ್ದಾರಿಯನ್ನು ನೀಡಲಾಗಿದೆ ಆದ್ದರಿಂದ ನಾವು ಸೇವೆ ಮಾಡುವುದು ಬೇಡ ಎಂದು ಭಾವಿಸುವವರಿಗೆ ದೇವರು ಕೊಡುವ ಎಚ್ಚರಿಕೆಯಾಗಿದೆ. ಅವರಿಗೆ ಹೆಚ್ಚಿನ ಜವಾಬ್ದಾರಿಯನ್ನು ನೀಡಿದರೆ ಅವರು ಅದನ್ನು ಎಷ್ಟು ಚೆನ್ನಾಗಿ ನಿಭಾಯಿಸುತ್ತಾರೋ ಅದೇ ರೀತಿಯಲ್ಲಿ ಕಡಿಮೆ ಜವಬ್ದಾರಿಯನ್ನು ಕೂಡ ಅವರು ನಿಭಾಯಿಸಬೇಕಾಗುತ್ತದೆ. ಇದರಲ್ಲಿ ಅವರು ತಪ್ಪು ಮಾಡುತ್ತಿದ್ದಾರೆ. ದೇವರು ವರಗಳನ್ನು ಹಂಚುವುದರಲ್ಲಿ ನಮ್ಮ ಗುಣಗಳನ್ನು ಪರೀಕ್ಷಿಸುತ್ತಾನೆ. ತನ್ನ ವರಗಳನ್ನು ನಿರ್ಲಕ್ಷ ಮಾಡಿದವನು ಅಪನಂಬಿಕೆಯ ಸೇವಕನಾಗುತ್ತಾನೆ. ಅವನಿಗೆ ಒಂದು ವೇಳೆ ಐದು ತಲಾಂತುಗಳನ್ನು ನೀಡಿದರೆ ಅವುಗಳನ್ನು ಕೂಡ ಅವನು ನೆಲದಲ್ಲಿ ಹೂತಿಡುತ್ತಿದ್ದನು. ಅವನು ಒಂದು ತಲಾಂತನ್ನು ಸರಿಯಾಗಿ ಉಪಯೋಗಿಸದೆ ಇದ್ದದ್ದು ಪರಲೋಕದ ಬಹುಮಾನವನ್ನು ಅವಮಾನಪಡಿಸಿದಂತೆ ತೋರುತ್ತದೆ. ಸ್ವಲ್ಪವಾದದ್ದರಲ್ಲಿ ನಂಬಿಗಸ್ತನಾದವನು ಬಹಳವಾದದ್ದರಲ್ಲಿಯೂ ನಂಬಿಗಸ್ತನಾಗುವನು ಸ್ವಲ್ಪವಾದದ್ದರಲ್ಲಿ ಅನ್ಯಾಯಗಾರನಾದವನು ಬಹಳವಾದದ್ದರಲ್ಲಿಯೂ ಅನ್ಯಾಯಗಾರನಗುವನು ಲೂಕ 16:10. ಸಣ್ಣ ವಿಷಯಗಳಲ್ಲಿ ನಂಬಿಕೆಯಾಗಿರುವುದನ್ನು ಕೀಳಾಗಿ ನೋಡಲಾಗುವುದು ಯಾಕೆಂದರೆ ಅವು ಚಿಕ್ಕದಾಗಿ ಕಾಣುತ್ತವೆ. ಆದರೆ ಅವು ಜೀವನದ ಕ್ರಮ ಶಿಕ್ಷಣವನ್ನು ತೋರಿಸುತ್ತವೆ. ನಾವು ಸಣ್ಣ ವಿಚಾರಗಳಲ್ಲಿ ಹೇಗೆ ನಂಬಿಕೆಯಾಗಿರುತ್ತೇವೋ ಅದರ ಮೇಲೆ ನಮ್ಮ ಜೀವನದ

**ಗುಣಗಳು ರೂಪುಗೊಳ್ಳುತ್ತವೆ. ಎಲೆನ್ ಜಿ ವೈಟ್ ಕ್ರೈಸ್ಟ್ ಆಬ್ಜೆಕ್ಟ್ ಲೆಸೆನ್ಸ್ ಪುಟ 356.**

## ಚರ್ಚಿಸಬೇಕಾದ ಪ್ರಶ್ನೆಗಳು:

1. ಲೋಕದ ಅಂತ್ಯದ ಕುರಿತಾಗಿ ಜನರು ಯೋಚಿಸುವ ಕೆಲವು ಅವೈಜ್ಞಾನಿಕವಾದ ಊಹೆಗಳು ಯಾವುವು? ಈ ಊಹೆಗಳು ಯಾಕೆ ನೆರವೇರುವುದಿಲ್ಲ? ಮತ್ತು ಅವು ಯಾಕೆ ವಿಫಲವಾಗಿವೆ?

2. ದೇವರು ಹೇಳಿದ್ದನ್ನು ನಾವು ಮಾಡುವಾಗ ಅದು ನಮ್ಮ ನಂಬಿಕೆಯನ್ನು ಹೇಗೆ ಬಲಪಡಿಸುತ್ತದೆ? ಕ್ರಿಯೆಗಳಿಲ್ಲದ ನಂಬಿಕೆಯು ಹೇಗೆ ವ್ಯರ್ಥವಾಗುತ್ತದೆ? (ಯಾಕೋಬ 2:26)? ದೇವರ ಆಜ್ಞೆಗಳನ್ನು ಕೈಕೊಂಡು ನಡೆಯುವವರಿಗೆ ಯಾವ ರೀತಿಯ ಕಷ್ಟಗಳು ಬರುತ್ತವೆ? (ಪ್ರಕಟಣೆ 14:12), ನಮ್ಮ ಮೇಲೆ ಬರಲಿರುವ ಕಷ್ಟಗಳ ವಿಚಾರವಾಗಿ ನಾವು ಹೇಗೆ ಸಿದ್ದತೆಯನ್ನು ನಡೆಸಬೇಕು?

3. ಹತ್ತು ಮಂದಿ ಕನ್ಯೆಯರ ಕುರಿತಾಗಿ ಹೆಚ್ಚಾಗಿ ಆಲೋಚಿಸಿರಿ. ಅವರ ಕಥೆಯು ನಮಗೆ ಹೇಗೆ ಎಚ್ಚರಿಕೆಯಾಗುತ್ತದೆ ಮೇಲ್ನೋಟಕ್ಕೆ ಅವರೆಲ್ಲರೂ ಒಂದೇ ರೀತಿಯ ಸಿದ್ದತೆಯನ್ನು ನಡೆಸಿರುವಂತೆ ಕಂಡರೂ ಕೂಡ ಅವರು ಹೇಗೆ ವ್ಯತ್ಯಾಸವಾಗಿ ಕಾಣುತ್ತಾರೆ? ಆ ಬುದ್ಧಿಹೀನ ಕನ್ಯೆಯರ ಹೇಗೆ ತಮ್ಮನ್ನು ತಾವು ಮೋಸಗೊಳಿಸಿ ಕೊಂಡರೋ ಹಾಗೆ ನಾವು ನಮ್ಮನ್ನು ನಾವು ಮೋಸಗೊಳಿಸಿಕೊಳ್ಳದೆ ಇರಲು ತೆಗೆದುಕೊಳ್ಳಬೇಕಾದ ಕ್ರಮಗಳೇನು?

4. ಆಯ್ಕೆಯಾದವರ ಸಹಿತವಾಗಿ ಮೋಸಕ್ಕೆ ಒಳಗಾಗುವರು ಎಂಬುದರ ಅರ್ಥವೇನು? 'ಆಯ್ಕೆ'ಯಾದವರ ಕುರಿತಾಗಿ ನಮ್ಮ ಭಾವನೆ ಏನು? (ಮತ್ತಾಯ 24:31, ರೋಮ 8:33, ಕೊಲೆಸ್ಸೆ 3:12)? ಮೋಸ ಮಾಡುವ ವಿಧಾನವು ಎಷ್ಟು ಘೋರವಾಗಿರುತ್ತದೆ ಎಂಬುದರೆಅ ಕುರಿತಾಗಿ ಇದು ಏನು ಹೇಳುತ್ತದೆ?